ಓ ಎಸ್ ನಂ. 148/2020

ಡಿ ಡಬ್ಲ್ಯು 1

ದಿನಾಂಕ 09-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ಜಿ ಪಿ ವಕೀಲರಿಂದಃ

ನಾನು ಇಂಜಿನೀಯರಿಂಗ್ ವ್ಯಾಸಂಗ ಮಾಡಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತಿಗೆ ನಾನೇ ಮಾಲೀಕ ಎಂದರೆ ಸರಿ. ನಿಪಿ-1(ಎ) ರಂತೆ ಗುರುತಿಸಿರುವ ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿದೆ ಎಂದರೆ ಸಾಕ್ಷಿ ಸರಿ ಎಂದು ನುಡಿದು, ಸದರಿ ಕರಾರು ಪತ್ರವನ್ನು ಸಾಲಕ್ಕಾಗಿ ಬರೆದುಕೊಡಲಾಗಿದೆ ಮಾರಾಟಕ್ಕಾಗಿ ಅಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ದಾಖಲೆಯಲ್ಲಿ ಸಾಲಕ್ಕಾಗಿ ಮಾತ್ರ ಕರಾರು ಮಾಡಿಕೊಳ್ಳುತ್ತಿರುವುದಾಗಿ ಬರೆದಿದೆಯಾ ಎಂದರೆ ಸಾಕ್ಷಿ ಹೌದು ಬರೆದಿದೆ ನೋಡಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-1 ರ ದಾಖಲೆಯನ್ನು ನೀಡಿ ಆ ರೀತಿ ಒಕ್ಕಣಿಕೆ ಎಲ್ಲಿ ಬರೆದಿದೆ ಎಂದರೆ ಸಾಕ್ಷಿ ದಾಖಲೆಯನ್ನು ಓದಿ ಅದರಲ್ಲಿ ಆ ರೀತಿಯ ಒಕ್ಕಣಿಕೆ ಇಲ್ಲವೆಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರದ ಬಾಬ್ತು ನಾನು ವಾದಿ ಕಡೆಯಿಂದ 3.5 ಲಕ್ಷ ರೂ ಪಡೆದಿರುತ್ತೇನೆ ಎಂದರೆ ಸರಿ. ನಿಪಿ-1 ರ ಕರಾರನ್ನು ಮಾಡಿಕೊಡುವ ಕಾಲಕ್ಕೆ ದಾವಾ ಆಸ್ತಿಯ ಬೆಲೆ ತೀರಾ ಕಡಿಮೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಾಸ್ತಿ ಬೆಲೆ ಇತ್ತು ಎಂದು ನುಡಿಯುತ್ತಾರೆ. ಇತ್ತೀಚೆಗೆ ಎಸ್ ಆರ್

ವ್ಯಾಲ್ಯೂಗಳು ಎರಡು ಪಟ್ಟು ಹೆಚ್ಚಾಗಿದೆ ಎಂದರೆ ಸರಿ. ಬೆಲೆ ಹೆಚ್ಚಾಗಿರುವ ಕಾರಣ ಆಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ನಾನು ಆಸ್ತಿ ಮಾರಾಟಕ್ಕೆ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಸಾಲಕ್ಕಾಗಿ ಮಾತ್ರ ಕರಾರು ಬರೆದುಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆ ಕೇವಲ ಹಣದ ಭದ್ರತೆಗಾಗಿ ಮಾತ್ರ ಎನ್ನುವ ಬಗ್ಗೆ ನಾನು ಎದುರು ಕರಾರು ಬರೆಸಿಕೊಂಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಎದುರುಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಅಂತಹ ಯಾವುದೇ ಎದುರುಕರಾರು ಪತ್ರ ಇಲ್ಲದೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯನ್ನು ಹೂಡುವ ಮೊದಲು ವಾದಿ ವಕೀಲರ ಮೂಲಕ ನಿಪಿ-4 ರಂತೆ ನೋಟೀಸು ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿ. ಸದರಿ ನೋಟೀಸಿಗೆ ಜವಾಬು ನೀಡಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ನಾನು ಒಟ್ಟು 6 ಲಕ್ಷ ರೂಗಳಿಗೆ ನಿಪಿ-1 ರಂತೆ ಕರಾರು ಪತ್ರ ಮಾಡಿಕೊಟ್ಟಿದ್ದು ಮುಂಗಡವಾಗಿ 3.5 ಲಕ್ಷ ರೂಗಳನ್ನು ವಾದಿಯಿಂದ ಪಡೆದಿರುತ್ತೇನೆ

ಮತ್ತು ಕ್ರಯಪತ್ರವಾಗುವ ಸಮಯದಲ್ಲಿ ಬಾಕಿ ಹಣ ಪಡೆಯುವುದಾಗಿ ಒಪ್ಪಿದ್ದೆ ಎಂದರೆ ಸಾಕ್ಷಿ ನಾನು ಸಾಲಕ್ಕಾಗಿ 3.5 ಲಕ್ಷ ರೂ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರಕ್ಕೆ ಸಾಕ್ಷಿದಾರರನ್ನು ನಾನೇ ಕರೆದುಕೊಂಡು ಬಂದಿದ್ದೆ ಎಂದರೆ ಸರಿ. ಸದರಿ ಸಾಕ್ಷಿದಾರರ ಸಮಕ್ಷಮದಲ್ಲೇ ನಾನು 3.5 ಲಕ್ಷ ರೂ ಪಡೆದಿರುತ್ತೇನೆ ಎಂದರೆ ಸರಿ. ನಾನು ಸಾಕ್ಷಿದಾರರ ಸಮಕ್ಷಮ 3.5 ಲಕ್ಷ ರೂ ಹಣವನ್ನು ಪಡೆದುಕೊಂಡು ಅದರಂತೆ ನಿಪಿ-1 ರ ಕರಾರು ಪತ್ರವನ್ನು ನೊಂದಣಿ ಮಾಡಿರುತ್ತೇನೆ ಎಂದರೆ ಸರಿ. ದಾವಾ ಜಮೀನು ಮಾರಾಟ ಮಾಡುವ ಉದ್ದೇಶದಿಂದ ನಾನು 6 ಲಕ್ಷ ರೂಗಳಿಗೆ ಒಪ್ಪಿ ನಿಪಿ-1 ರಂತೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಾನು ವಾದಿಯಿಂದ ಪಡೆದ 3.5 ಲಕ್ಷ ರೂಗಳಿಗೆ ವಾದಿ ಭದ್ರತೆ ಕೇಳಿದ್ದರಿಂದ ನಾನು ನಿಪಿ-1 ರ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಅಷ್ಟೇ ಎಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರದಂತೆ ನಡೆದುಕೊಳ್ಳುವಂತೆ ವಾದಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸಾಲಕ್ಕಾಗಿ ಹಣ ಪಡೆದಿದ್ದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.